# ಕನ್ನಡ ಪೋಸ್ಟ್



ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 18 | Pages. 2 | Date: 13-12-2025, SATURDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 18 - ಪುಟಗಳು : 2 | 13-12-2025 | ಶನಿವಾರ | Ph: 8762954248 | ದರ : ₹1


# ದುಸ್ಥಿತಿ ತಲುಪಿದ ಶತಮಾನ ಪೂರೈಸಿದ ಆಸ್ಪತ್ರೆ

## ಹಿರೀಸಾವೆ ಸಮುದಾಯ ಕೇಂದ್ರದ ಸ್ಥಿತಿ ಶೋಚನೀಯ | ರೋಗಿಗಳ ಪರದಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಶತಮಾನ ಪೂರೈಸಿದ ತಾಲ್ಲೂಕಿನ ಹಿರೀಸಾವೆ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಸಂಪೂರ್ಣ ಶಿಥಿಲಾವಸ್ಥೆ ತಲುಪಿದ್ದು ಸಾರ್ವಜನಿಕರಿಗೆ ಚಿಕಿತ್ಸೆ ನೀಡಬೇಕಿದ್ದ ಆಸ್ಪತ್ರೆಗೆ ಚಿಕಿತ್ಸೆಯ ಅಗತ್ಯವಿದೆ.

ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತಿರುವ ಆರೋಗ್ಯ ಕೇಂದ್ರವು 30 ಹಾಸಿಗೆ ಸಾಮರ್ಥ್ಯ ಹೊಂದಿದೆ. ಮೂವರು ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಿತ್ಯ 350ಕ್ಕೂ ಹೆಚ್ಚು ಹೊರ ರೋಗಿಗಳು ಚಿಕಿತ್ಸೆಗಾಗಿ ಬರುತ್ತಾರೆ. 1925ರ ಮಾ. 13 ರಂದು ಅಂದಿನ ಮೈಸೂರು ಸಂಸ್ಥಾನದ ದಿವಾನ ಮಿರ್ ಹುಮ್ಜಾ ಹುಸೇನ್ ಅವರು ಲೋಕಾರ್ಪಣೆಗೊಳಿಸಿದ್ದರು. ಕಾಲದ ವೇಗಕ್ಕೆ ಸಿಲುಕಿ ಬೀಳುವ ಹಂತ ತಲುಪಿದ್ದು ನಂತರ ಅಧಿಕಾರಕ್ಕೆ ಬಂದ ಸರ್ಕಾರಗಳು ಹಳೆಯ ಕಟ್ಟಡ ಉಳಿಸಿಕೊಳ್ಳಲು ವಿಫಲವಾಗಿರುವುದಕ್ಕೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.

ನೂರು ವರ್ಷಗಳ ಹಿಂದೆ ಮಣ್ಣಿನ ಹೆಂಚುಗಳ ಅಳವಡಿಕೆಯೊಂದಿಗೆ ಕಟ್ಟಡ ನಿರ್ಮಾಣಗೊಂಡಿದ್ದು ಗೋಡೆಗಳು




ಅಲ್ಲಲ್ಲಿ ಬಿರುಕು ಬಿಟ್ಟಿವೆ. ಛಾವಣಿಯ ಮರ ಮುಟ್ಟುಗಳು ಗೆದ್ದಲು ಹಿಡಿದು ಸಂಪೂರ್ಣ ಹಾಳಾಗಿದೆ. ನಂತರದಲ್ಲಿ ನಿರ್ಮಾಣಗೊಂಡಿರುವ ಕಾಂಕ್ರೀಟ್ ಕಟ್ಟಡಗಳು ಸಹ ಶಿಥಿಲಾವಸ್ಥೆ ತಲುಪಿವೆ. ಗೋಡೆ ಅಲ್ಲಲ್ಲಿ ಬಿರುಕು ಬಿಡುವುದರ ಜೊತೆಗೆ ಛಾವಣಿಯ ಸಿಮೆಂಟ್ ಉದುರುತ್ತಿದ್ದು ಕಬ್ಬಿಣದ ಕಂಬಿಗಳು ಕಾಣಿಸುತ್ತಿವೆ. ಇಂತಹ ಅಪಾಯದ ಕೆಳಗಡೆ ರೋಗಿಗಳು ಚಿಕಿತ್ಸೆ ಪಡೆಯಬೇಕಾದ ಅನಿವಾರ್ಯತೆ ಎದುರಾಗಿದೆ.

ಮೂವರು ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದು ಇನ್ನೂ ಒಂದು ಹುದ್ದೆ ಖಾಲಿ ಇದೆ. ಅಪಘಾತ ಹಾಗು ತುರ್ತು ಚಿಕಿತ್ಸೆ ಅವಶ್ಯಕತೆ ಇದ್ದಾಗ ಕೇಂದ್ರದಲ್ಲಿ ಸೌಲಭ್ಯಗಳಿಲ್ಲದ ಪರಿಣಾಮ ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆ ಅಥವಾ ಬೆಳ್ಳೂರು ಕ್ರಾಸ್‌ನ ಆದಿಚುಂಚನಗಿರಿ ಆಸ್ಪತ್ರೆಗೆ ರೋಗಿಗಳನ್ನು ಕರೆದೊಯ್ಯಬೇಕಾದ ಪರಿಸ್ಥಿತಿ ದಶಕಗಳಿಂದ ಮುಂದುವರಿದುಕೊಂಡು ಬಂದಿದೆ. ಸಮುದಾಯ ಆರೋಗ್ಯ ಕೇಂದ್ರದ ಹಿಂಭಾಗದಲ್ಲಿರುವ ಶವಗಾರದ ಕಟ್ಟಡವು ಸಂಪೂರ್ಣ ಹಾಳಾಗಿದ್ದು ಗೋಡೆಗಳು ಶಿಥಿಲಾವಸ್ಥೆ ತಲುಪಿವೆ. ಕಟ್ಟಡದ ಕಿಟಕಿಯ ಸಜ್ಜಾ ಹಾಗು ಮೇಲ್ಭಾಗದ ಕಾಂಕ್ರಿಟ್ ಛಾವಣಿಯ ಮೇಲೆ ಗಿಡಗಂಟಿ ಬೆಳೆದು ನಿಂತಿವೆ. ಅದರ ಕೆಳಗಡೆಯೇ ಮರಣೋತ್ತರ ಪರೀಕ್ಷೆ ನಡೆಸಬೇಕಿದೆ. ಪುರುಷರು ಹಾಗು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯಗಳಿದ್ದರೂ ಸ್ವಚ್ಛತೆ ಕೊರತೆ ಕಾಡುತ್ತಿದೆ. ಶೌಚಾಲಯದ ಗೋಡೆಗಳು ಹಾಳಾಗಿದ್ದು ಬಾಗಿಲುಗಳು ಹಾನಿಗೀಡಾಗಿವೆ.

ಈ ಬಗ್ಗೆ ಸ್ಥಳೀಯರಾದ ರವಿಕುಮಾರ್ ಮಾತನಾಡಿ, ಸಂಜೆ ನಂತರ ಆಸ್ಪತ್ರೆಯಲ್ಲಿ ವೈದ್ಯರಿರುವುದಿಲ್ಲ. ರಾಷ್ಟ್ರೀಯ ಹೆದ್ದಾರಿ ಸಮೀಪದಲ್ಲಿರುವುದರಿಂದ ಅಪಘಾತ ಪ್ರಕರಣಗಳು ಹೆಚ್ಚುತ್ತವೆ. ಕನಿಷ್ಠ ಪ್ರಾಥಮಿಕ ಚಿಕಿತ್ಸೆ ನೀಡಲಾದರೂ ಖಾಯಂ ವೈದ್ಯರು ಇರಬೇಕು. ಶತಮಾನದ ಕಟ್ಟಡ ಉಳಿಸಿಕೊಳ್ಳುವುದು ಜನಪ್ರತಿನಿಧಿ ಹಾಗು ಅಧಿಕಾರಿಗಳ ಆದ್ಯತೆಯಾಗಬೇಕು ಎಂದರು.

### ಖಾಲಿ ಹುದ್ದೆ ಭರ್ತಿ ಸವಾಲು

ಆಸ್ಪತ್ರೆಯಲ್ಲಿ ಸದ್ಯ ಮೂರು ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದು ಒಂದು ಹುದ್ದೆ ಖಾಲಿ ಇದೆ. ಸಂಜೆ 5ರ ನಂತರ ಆಸ್ಪತ್ರೆಯಲ್ಲಿ ವೈದ್ಯರು ಇರುವುದಿಲ್ಲ. ಗ್ರಾಮದ ಹೃದಯ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದು ಹೋಗಿದ್ದು ವಾರದಲ್ಲಿ 2-3 ಅಪಘಾತ ಪ್ರಕರಣ ಘಟಿಸುತ್ತವೆ. ಇಂತಹ ಸಂದರ್ಭದಲ್ಲಿ ಅಪಘಾತ, ಹೃದಯಾಘಾತ ಇಲ್ಲವೆ ಇತರೆ ತುರ್ತು ಚಿಕಿತ್ಸೆಗೆ ರೋಗಿಗಳನ್ನು ಕರೆದುಕೊಂಡು ಬಂದರೆ ವೈದ್ಯರಿಲ್ಲ ಎಂಬ ಉತ್ತರ ಸಾಮಾನ್ಯವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗಮನಹರಿಸಿ ಆಸ್ಪತ್ರೆಯ ನವೀಕರಣ ಹಾಗೂ ವೈದ್ಯರ ನೇಮಕಾತಿಯೊಂದಿಗೆ ಆರೋಗ್ಯ ಕೇಂದ್ರದ ಸಮಸ್ಯೆಗಳನ್ನು ಬಗೆಹರಿಸಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

> **ಅನುದಾನ ಲಭ್ಯತೆ ಅನುಗುಣವಾಗಿ ಆಸ್ಪತ್ರೆಗೆ ಹಂತ ಹಂತವಾಗಿ ಸೌಲಭ್ಯ ಕಲ್ಪಿಸಲಾಗಿದೆ. ಕಟ್ಟಡ ನವೀಕರಣಕ್ಕೆ ಒಂದೂವರೆ ಕೋಟಿ ರೂ. ಅನುದಾನ ಅಗತ್ಯವಿದ್ದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂದಿನ ನಾಲ್ಕೈದು ದಿನಗಳಲ್ಲಿ ಅನುಮೋದನೆ ದೊರೆಯುವ ಸಾಧ್ಯತೆ ಇದೆ.**
>
> **- ಸಿ.ಎನ್. ಬಾಲಕೃಷ್ಣ, ಶಾಸಕ**

# ಕ್ರಿಸ್ಮಸ್ ರಜೆ ಒಂದು ದಿನಕ್ಕೆ ಸೀಮಿತವಾಗಲಿ: ಶ್ರೀರಾಮ ಸೇನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕ್ರಿಸ್ಮಸ್ ಹಬ್ಬಕ್ಕೆ ಶಿಕ್ಷಣ ಸಂಸ್ಥೆಗಳು ಹತ್ತು ದಿನಗಳ ವರೆಗೆ ರಜೆ ನೀಡುತ್ತಿದ್ದು ಅದನ್ನು ನಿಷೇಧಿಸಿ ಒಂದು ದಿನಕ್ಕೆ ಸೀಮಿತಗೊಳಿಸಬೇಕು ಎಂದು ಆಗ್ರಹಿಸಿ ಶ್ರೀರಾಮ ಸೇನೆ ಕಾರ್ಯಕರ್ತರು ಶುಕ್ರವಾರ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ಸರ್ಕಾರದ ಅಧಿಸೂಚನೆಂ ಪ್ರಕಾರ ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆಗಳು, ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲಾ-ಕಾಲೇಜುಗಳು ನಿಗದಿತ ರಜೆ ದಿನಗಳಲ್ಲಿ ಕಡ್ಡಾಯವಾಗಿ ರಜೆ ಘೋಷಿಸಬೇಕಾಗಿದೆ. ಆದರೆ ಕೆಲವು ಖಾಸಗಿ ಶಾಲೆಗಳು, ವಿಶೇಷವಾಗಿ ಕ್ರಿಶ್ಚಿಯನ್ ಆಡಳಿತದಲ್ಲಿರುವ ಸಂಸ್ಥೆಗಳು, ಸರ್ಕಾರದ ರಜೆ ಆದೇಶವನ್ನು ಉಲ್ಲಂಘಿಸಿ ದಸರಾ ರಜೆಯನ್ನು ರದ್ದು ಮಾಡಿ ತರಗತಿಗಳು ಹಾಗೂ ಪರೀಕ್ಷೆಗಳನ್ನು ನಡೆಸಿರುವುದು ಗಂಭೀರ ಅನ್ಯಾಯ ಎಂದು ದೂರಿದರು.

ಡಿ.25 ಕ್ರಿಸ್‌ಮಸ್ ಹಬ್ಬಕ್ಕೆ ಸರ್ಕಾರ ಅಧಿಕೃತವಾಗಿ ಒಂದು ದಿನ ರಜೆ ಮಾತ್ರ ಘೋಷಿಸಿದೆ. ಆದರೆ ಅನಧಿಕೃತವಾಗಿ ಕೆಲವು ಕ್ರಿಶ್ಚಿಯನ್ ಮೇಲುಸ್ತುವಾರಿಯ ಶಾಲೆಗಳು 10 ದಿನಗಳವರೆಗೆ ರಜೆ ಘೋಷಿಸುತ್ತಿರುವುದು ಕಾನೂನು ಬಾಹಿರ ಮತ್ತು ಸರ್ಕಾರದ ಆದೇಶಕ್ಕೆ ವಿರುದ್ಧವಾಗಿದೆ. ಈ ಶಾಲೆಗಳಲ್ಲಿ ಶೇ.99 ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿ ಹಿಂದು ಸಮುದಾಯದವರೇ ಆಗಿದ್ದರೂ, ಅವರ ಮೇಲೆ ಕ್ರಿಶ್ಚಿಯನ್ ಧಾರ್ಮಿಕ ಆಚರಣೆಗಳನ್ನು ಬಲವಂತವಾಗಿ ಹೇರಲು ಪ್ರಯತ್ನಿಸುವುದು ಧಾರ್ಮಿಕ-ಸಾಂಸ್ಕೃತಿಕ ಹಸ್ತಕ್ಷೇಪ ಮಾಡಿದಂತಾಗುತ್ತದೆ ಎಂದು ಕಿಡಿಕಾರಿದರು.

ಅನಧಿಕೃತವಾಗಿ ದೀರ್ಘ ಅವಧಿಯ ಕ್ರಿಸ್‌ಮಸ್ ರಜೆ ಘೋಷಿಸುವ ಅಭ್ಯಾಸ ನಿಲ್ಲಿಸಬೇಕು. ಮುಂದಿನ ದಿನಗಳಲ್ಲಿ ಯಾವುದೇ ಧಾರ್ಮಿಕ ಪ್ರಾಬಲ್ಯವನ್ನು ವಿದ್ಯಾರ್ಥಿಗಳ ಮೇಲೆ ಹೇರಬಾರದು. ಚಟುವಟಿಕೆಗಳಿಗೆ ಕಟ್ಟುನಿಟ್ಟಿನ ನಿಷೇಧ ಜಾರಿಗೊಳಿಸಬೇಕು ಎಂದರು.

# ಗ್ರಾಮ ಅಭಿವೃದ್ಧಿಯಲ್ಲಿ ಪಂಚಾಯಿತಿ ಕೊಡುಗೆ ಅಪಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ನುಗ್ಗೇಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷಸ್ಥಾನಕ್ಕೆ ಎನ್.ಆರ್.ನಟರಾಜ್ ಶುಕ್ರವಾರ ಅವಿರೋಧವಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ಎನ್.ಆರ್.ನಟರಾಜ್ ಅವರನ್ನು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮ ಬಾಲಕೃಷ್ಣ ಅಭಿನಂದಿಸಿ ಮಾತನಾಡಿ, ಪಕ್ಷ ಬೇಧ ಮರೆತು ಪಾರದರ್ಶಕವಾಗಿ ಕೆಲಸ ಮಾಡುವ ಮೂಲಕ ಜನಸೇವೆ ಮಾಡುವುದು ಅಗತ್ಯ ಎಂದು ಹೇಳಿದರು.

ಗ್ರಾಮ ಪಂಚಾಯಿತಿಯು ಸರ್ಕಾರ ಹಾಗೂ ಸಾರ್ವಜನಿಕರ ನಡುವೆ ಸಂಪರ್ಕ ಸೇತುವೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಗ್ರಾಮೀಣ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಕೇಂದ್ರವಾಗಿದೆ. ಗ್ರಾಪಂ ಯೋಜನೆಗಳನ್ನು ಸದ್ಬಳಿಕೆ



ಮಾಡಿಕೊಂಡು ಕೆಲಸ ಮಾಡುವುದು ಪ್ರತಿಯೊಬ್ಬ ಸದಸ್ಯರ ಕರ್ತವ್ಯ ಎಂದು ತಿಳಿಸಿದರು.

ಗ್ರಾಮದ ಅಭಿವೃದ್ಧಿ ಸಲುವಾಗಿ ಚುನಾವಣೆ ವೇಳೆ ಜನತೆ ನಿಮ್ಮನ್ನು ಆಯ್ಕೆ ಮಾಡಿರುತ್ತಾರೆ. ಅವರ ನಂಬಿಕೆಗೆ ಅರ್ಹರಾಗಿ ಕೆಲಸ ಮಾಡಬೇಕು. ಅಗತ್ಯ ಮೂಲ ಸೌಲಭ್ಯಗಳಾದ ಕುಡಿಯುವ ನೀರು, ಸೂಕ್ತ ರಸ್ತೆ ಹಾಗೂ ಚರಂಡಿ ನಿರ್ಮಾಣ, ಬೀದಿ ದೀಪಗಳ ನಿರ್ವಹಣೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಗ್ರಾಮೀಣ ಪ್ರದೇಶ ಅಭಿವೃದ್ಧಿ ಹೊಂದಿದರೆ ಮಾತ್ರ ದೇಶ ಪ್ರಗತಿ ಕಾಣಲು ಸಾಧ್ಯವಾಗಲಿದೆ ಎಂದು ಸಲಹೆ ನೀಡಿದರು.

ನೂತನ ಅಧ್ಯಕ್ಷ ಎನ್.ಆರ್.ನಟರಾಜ್ ಮಾತನಾಡಿ, ಶಾಸಕ ಸಿ.ಎನ್.ಬಾಲಕೃಷ್ಣ ಅವರ ಮಾರ್ಗದರ್ಶನದಲ್ಲಿ ಸರ್ವ ಸದಸ್ಯರ ವಿಶ್ವಾಸ ಹಾಗೂ ಸಲಹೆ ಪಡೆದು ವ್ಯಾಪ್ತಿಯ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಎನ್.ಆರ್.ನಟರಾಜ್ ಅವರನ್ನು ವಿವಿಧ ಕ್ಷೇತ್ರದ ಗಣ್ಯರು, ಮುಖಂಡರು ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಅಭಿನಂದಿಸಲಾಯಿತು. ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು. ನುಗ್ಗೇಹಳ್ಳಿ ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಆಶೀರ್ವದಿಸಿದರು.

ಟಿಎಪಿಸಿಎಂಎಸ್ ನಿರ್ದೇಶಕ ತೋಟಿ ನಾಗರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಆರ್.ದೊರೆಸ್ವಾಮಿ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವಿರ್ಕ್ಟ ಮಾಜಿ ಅಧ್ಯಕ್ಷ ಸಂಪತ್ ಕುಮಾರ್, ತಾಪಂ ಮಾಜಿ ಸದಸ್ಯ ಬೆಳಗಿಹಳ್ಳಿ ಪುಟ್ಟಸ್ವಾಮಿ, ಜಿಪಂ ಮಾಜಿ ಉಪಾಧ್ಯಕ್ಷ ನಟರಾಜ್, ಪ್ರಮುಖರಾದ ಜಾವಿದ್, ಗೋಪಾಲ್, ಗುಂಡಣ್ಣ ಇತರರಿದ್ದರು.

# ಪತ್ರಕರ್ತರ ಹೆಸರಲ್ಲಿ ವಸೂಲಿಗೆ ಬಂದರೆ ಮಾಹಿತಿ ನೀಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಿರಿಯ ಪತ್ರಕರ್ತ ಡಿ.ವಿ. ಗುಂಡಪ್ಪ ಸ್ಥಾಪಿಸಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಂಗ ಸಂಸ್ಥೆಯಾಗಿರುವ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ಇಡೀ ರಾಜ್ಯದಲ್ಲೇ ತನ್ನದೇ ಆದ ಶಿಸ್ತು, ಬದ್ಧತೆ, ಕಾರ್ಯ ತತ್ಪರತೆ ಉಳಿಸಿಕೊಂಡು ಬಂದಿದ್ದು, ಸಂಘದ ಸರ್ವ ಸದಸ್ಯರೂ ಅದಕ್ಕೆ ಬದ್ಧರಾಗಿರಬೇಕು ಎಂದು ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಶುಕ್ರವಾರ ಮಾತನಾಡಿ, ಸಂಘದ ಹೆಸರಿನಲ್ಲಿ ಅಥವಾ ಸದಸ್ಯರು ಎಂದ ಹೇಳಿಕೊಂಡು ಯಾರಾದರೂ ಹಣ ಅಥವಾ ಬೇರಾವುದೋ ಕಾರಣಕ್ಕೆ ಬ್ಲಾಕ್‌ಮೇಲ್ ಮಾಡಿದರೆ ತಕ್ಷಣವೇ ಸಂಘದ ಕಚೇರಿಗೆ, ಸಂಬಂಧಪಟ್ಟ ಪೊಲೀಸರಿಗೆ ದೂರು ನೀಡುವಂತೆ ಮನವಿ ಮಾಡಿದರು.

ಕೆಲವರು ನಾವು ಈ ಸಂಸ್ಥೆಯ ಪ್ರತಿನಿಧಿಗಳು ಅಥವಾ ವರದಿಗಾರರು,




ಯೂಟ್ಯೂಬ್ ಚಾನೆಲ್‌ನವರು ಎಂದು ಹೇಳಿಕೊಂಡು ರಾಜಕಾರಣಿಗಳು, ಗುತ್ತಿಗೆದಾರರು ಅಥವಾ ಸಂಘ ಸಂಸ್ಥೆಗಳ ಬಳಿ ಹಣಕ್ಕಾಗಿ ಬೇಡಿಕೆ ಇಟ್ಟರೆ ಇಲ್ಲವೇ ಆಮಿಷ ಅಥವಾ ಬೆದರಿಕೆ ಒಡ್ಡಿದರೆ ದೂರು ನೀಡಿ ಎಂದರು.

ಇಂತಹ ವಾತಾವರಣದಿಂದ ಪ್ರಾಮಾಣಿಕ ಪತ್ರಕರ್ತರಿಗೆ ಕಿರಿಕಿರಿ ಆಗುತ್ತದೆ. ಬ್ಲಾಕ್‌ಮೇಲ್ ಪತ್ರಕರ್ತರಿಗೆ ಕಡಿವಾಣ ಹಾಕುವ ಅನಿವಾರ್ಯತೆ ಇದೆ. ಅಂತವರ ವಿರುದ್ಧ ಪುರಾವೆ ಸಹಿತ ದೂರು ನೀಡಿದರೆ ಖಂಡಿತಾ ಸಂಘವು ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು.

ಸಂಘಕ್ಕೆ, ಪೊಲೀಸರಿಗೆ ದೂರು ನೀಡಲು ಆಗದಿದ್ದರೆ ನ್ಯಾಯಾಲಯಗಳಲ್ಲೂ ಮಾನನಷ್ಟ ಮೊಕದ್ದಮೆ ಹೂಡಬಹುದು, ಅಡ್ಡದಾರಿ ಹಿಡಿಯುವ ಪತ್ರಕರ್ತರ ಪರವಾಗಿ ನಮ್ಮ ಸಂಘ ಖಂಡಿತಾ ಇಲ್ಲ ಎಂದು ಸ್ಪಷ್ಟಪಡಿಸಿದರು.

ರಾಜಕಾರಣಿಗಳು, ಸಂಘ-ಸಂಸ್ಥೆಗಳ ಮುಖ್ಯಸ್ಥರು ಪತ್ರಕರ್ತರ ಸೋಗಿನಲ್ಲಿ ತಮಗೆ ಯಾರೇ ತೊಂದರೆ ನೀಡಿದರೂ ಸಂಘದ ಗಮನಕ್ಕೆ ತರುವ ಮೂಲಕ ಸಹಕಾರ ನೀಡಬೇಕು ಎಂದು ಕೋರಿದರು.

28ಕ್ಕೆ ತಾಲ್ಲೂಕು ಘಟಕಕ್ಕೆ ಚುನಾವಣೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸೂಚನೆ ಮೇರೆಗೆ ಜಿಲ್ಲೆಯ ಏಳು ತಾಲೂಕುಗಳ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ-ಉಪಾಧ್ಯಕ್ಷ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಡಿ. 28ರಂದು ಏಕ ಕಾಲಕ್ಕೆ ನಿಗದಿಗೊಳಿಸಲಾಗಿದೆ ಎಂದು ಕೆಂಚೇಗೌಡ ತಿಳಿಸಿದರು.

ಎಲ್ಲ ಸಂಘದವರು ಯಶಸ್ವಿ ಅಥವಾ ಶಾಂತಿಯುತ ಚುನಾವಣೆಗೆ ಸಹಕಾರ ನೀಡಬೇಕು. ಆದಷ್ಟು ಅವಿರೋಧ ಆಯ್ಕೆಗೆ ಒತ್ತು ನೀಡಬೇಕು ಎಂದು ಅಧ್ಯಕ್ಷರು ವಿನಂತಿಸಿದರು.

ಸುದ್ದಿಗೋಷ್ಟಿಯಲ್ಲಿ ಉಪಾಧ್ಯಕ್ಷರಾದ ಎನ್.ನಂಜುಂಡೇಗೌಡ, ಜಿ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಕಾರ್ಯದರ್ಶಿಗಳಾದ ಬಿ.ಆರ್.ಬೊಮ್ಮೇಗೌಡ, ಕೆ.ಎಂ. ಹರೀಶ್, ಖಜಾಂಚಿ ಪ್ರಕಾಶ್ ಇದ್ದರು.

# ಅಂಕಪುರ ಗ್ರಾಮದಲ್ಲಿ ಆರೋಗ್ಯ ತಪಾಸಣೆ ಶಿಬಿರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ಅಂಕಪುರ ಗ್ರಾಮದಲ್ಲಿ ಆರೋಗ್ಯ ಉಚಿತ ತಪಾಸಣೆ ಹಾಗೂ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ, ಭಾರತೀಯ ರೆಡ್ ಕ್ರಾಸ್, ಜಿಲ್ಲಾ ಔಷಧ ಸಗಟು ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘ, ಡಾ. ಗುರುರಾಜ ಹೆಬ್ಬಾರ್ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್, ಭಾರತ ಸೇವಾದಳ, ಜಿಲ್ಲಾ ವೈಜ್ಞಾನಿಕ ಸಂಶೋಧನಾ ಪರಿಷತ್ ಜಿಲ್ಲಾ ಘಟಕದಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಹಿಮ್ಸ್ ಪ್ರಾಂಶುಪಾಲೆ ಡಾ. ಸಿ.ಬಿ. ಕವಿತಾ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಔಷಧ ಸಗಟು ವ್ಯಾಪಾರಿಗಳ ಸಂಘದ ಅಧ್ಯಕ್ಷ ಸಣ್ಣ ಮಂಜೇಗೌಡ, ಉಪಾಧ್ಯಕ್ಷ ಗಣೇಶ್, ಕಾರ್ಲೆ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ತೇಜಸ್ವಿ, ಡಾ. ಮೇಘನಾ, ಶಿಕ್ಷಕ ವಿಜಯಕುಮಾರ್, ಕಾಂಗ್ರೆಸ್ ಮುಖಂಡ ಹೇಮಂತ್ ಗೌಡ, ವಿ.ಎಸ್. ರಾಣಿ ಮತ್ತಿತರರಿದ್ದರು. ಸುಮಾರು 80 ಶಿಬಿರಾರ್ಥಿಗಳು ಹಾಗೂ 20ಕ್ಕೂ ಹೆಚ್ಚು ವೈದ್ಯರು ಶಿಬಿರದಲ್ಲಿ ಭಾಗವಹಿಸಿದರು. 500ಕ್ಕೂ ಹೆಚ್ಚು ಫಲಾನುಭವಿಗಳು ಪ್ರಯೋಜನ ಪಡೆದರು.

# ನೂತನ ದೇವಾಲಯ ನಿರ್ಮಾಣಕ್ಕೆ ಭೂಮಿಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಬಾಳ್ಳುಪೇಟೆಯ ಜೆ.ಪಿ. ನಗರದಲ್ಲಿ ಶ್ರೀ ಅದಿನಾಗ ಬ್ರಹ್ಮ ಮೊಗೇರ್ಕಳ ಮತ್ತು ಶ್ರೀ ಸ್ವಾಮಿ ಕೊರಗಜ್ಜ, ಶ್ರೀ ಚೌಕಾರ್ ಮಂತ್ರವಾದಿ ಗುಳಿಗ ದೈವದ ಕ್ಷೇತ್ರದ ದೇವಸ್ಥಾನದ ಪುನರ್ ನಿರ್ಮಾಣಕ್ಕೆ ಶುಕ್ರವಾರ ಭೂಮಿಪೂಜೆ ನೆರವೇರಿಸಲಾಯಿತು.

ಬಾಳ್ಳುಪೇಟೆ ಜೆ.ಪಿ. ನಗರ, ಅಯೋಧ್ಯೆ ನಗರ ಹಾಗೂ ಓಂ ನಗರದ ನಿವಾಸಿಗಳು ಆರಾಧ್ಯ ದೈವ ಕೊರಗಜ್ಜ ದೇವಸ್ಥಾನದ ಭೂಮಿಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶಾಸಕ ಸಿಮೆಂಟ್ ಮಂಜು ಅವರ ಧರ್ಮಪತ್ನಿ ಪ್ರತಿಭಾ ಮಂಜುನಾಥ್ ಮಾತನಾಡಿ, ದೇವಾಲಯಗಳು ಜನತೆಯ ಶ್ರದ್ಧಾ ಭಕ್ತಿ ಜೊತೆಗೆ ಮನಶಾಂತಿಗೆ ಪೂರಕವಾದ ಕೇಂದ್ರಗಳಾಗಿವೆ. ಈ ದಿಸೆಯಲ್ಲಿ ಜೆ.ಪಿ. ನಗರದಲ್ಲಿ ಪುನ:



ನಿರ್ಮಾಣಗೊಳ್ಳುತ್ತಿರುವ ಕೊರಗಜ್ಜ ದೇವಾಲಯ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿರುವುದು ಸಂತಸ ತಂದಿದೆ. ಕಾಮಗಾರಿ ಶೀಘ್ರದಲ್ಲಿ ಪೂರ್ಣಗೊಂಡು ಸಾರ್ವಜನಿಕರ ಅನುಕೂಲಕ್ಕೆ ಬಳಕೆಯಾಗಲಿ ಎಂದು ಆಶಿಸಿದ ಅವರು ಕೊರಗಜ್ಜ ದೇವರು ಜನತೆಗೆ ಸುಖ ಶಾಂತಿಯನ್ನು ಕರುಣಿಸಲಿ. ಗ್ರಾಮದ ಜನತೆಯ ಯಾವುದೇ ದುಃಖ ದುಮ್ಮಾನಗಳಿಗೆ ಎಂದಿಗೂ ಶಾಸಕರು ಜೊತೆಯಾಗಿರುತ್ತಾರೆ ಎಂದು ಭರವಸೆ ನೀಡಿದರು.

ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ ಮಂಜುನಾಥ್, ಜಿಲ್ಲಾ ಮೋಗೇರ ಸಂಘದ ಕಾರ್ಯದರ್ಶಿ, ದೇವಸ್ಥಾನ ಅರ್ಚಕ ಕುಮಾರ್, ದೇವಸ್ಥಾನದ ಅಧ್ಯಕ್ಷ ಅಣ್ಣು ಮೇಸ್ತ್ರಿ ಉಪಾಧ್ಯಕ್ಷ ಸೀನಾ, ಮುಖಂಡರಾದ ಚಂದ್ರಪ್ಪ, ಜೆ.ಪಿ ಮಂಜು, ಬಸಪ್ಪಣ್ಣ, ಉದಯ ಶೆಟ್ಟಿ ಬಿಜೆಪಿ ಮುಖಂಡರಾದ ಮಣಸಮಕ್ಕಿ ಶಿವಕುಮಾರ್, ವಿರೂಪಾಕ್ಷ, ರವಿ, ಅಣ್ಣಪ್ಪ ಇತರರಿದ್ದರು.

# 1.50 ಲಕ್ಷ ರೂ. ಮೌಲ್ಯದ ಸಾಮಗ್ರಿ ಕಳವು

ಚನ್ನರಾಯಪಟ್ಟಣ: ಬಾಗೂರು ಹೋಬಳಿ ಕೋಡಿಹಳ್ಳಿ ಗ್ರಾಮದಲ್ಲಿರುವ ಅಕ್ಷಯ ಕಲ್ಪ ಫಾರಂ ಅಂಡ್ ಫುಡ್ಸ್ ಕಂಪನಿಯಲ್ಲಿ ಸುಮಾರು 1.50 ಲಕ್ಷ ರೂ. ಬೆಲೆಯ ಸಾಮಗ್ರಿ ಕಳ್ಳತನ ಮಾಡಲಾಗಿದೆ.

ಕಳೆದ ನಾಲ್ಕು ವರ್ಷಗಳಿಂದ ಕಂಪನಿ ಕಾರ್ಯನಿರ್ವಹಿಸುತ್ತಿದ್ದು 2025ರ ಅ. 1 ರಿಂದ 2025ರ ಡಿ. 10ರ ವರೆಗಿನ ಸ್ಟಾಕ್ ಪರಿಶೀಲಿಸಿದಾಗ ವ್ಯತ್ಯಾಸ ಕಂಡುಬಂದಿದೆ. 14 ಬ್ಯಾಟರಿ, 3 ಇನ್ವೆಟರ್ ಹಾಗೂ 6 ಮ್ಯಾಕ್ನಾಟಿಕ್ ಪಂಪ್ ಕಳ್ಳತನವಾಗಿದ್ದು ಅದರ ಒಟ್ಟು ಮೌಲ್ಯ 1.50 ಲಕ್ಷ ರೂ. ಆಗಿದೆ. ನುಗ್ಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕಾವೇರಿ 2 ತಂತ್ರಾಂಶ ಸರಳೀಕರಣಕ್ಕೆ ಆಗ್ರಹಿಸಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾವೇರಿ-2 ತಂತ್ರಾಂಶ ಜಾರಿ ಪರಿಣಾಮ ಉಂಟಾದ ತಾಂತ್ರಿಕ ಗೊಂದಲ, ಸಾರ್ವಜನಿಕರಿಗೆ ಎದುರಾಗುತ್ತಿರುವ ತೊಂದರೆ ಹಾಗೂ ಪತ್ರ ಬರಹಗಾರರ ವೃತ್ತಿ ಭದ್ರತೆಯ ಸಂಕಟ ಹೇಳಿಕೊಳ್ಳಲು ಇದೇ ಡಿ.15 ಮತ್ತು 16ರಂದು ಜಿಲ್ಲೆಯಾದ್ಯಂತ ಲೇಖನ ಸ್ಥಗಿತಗೊಳಿಸಿ ಧರಣಿ ಮತ್ತು ದಸ್ತಾವೇಜುಗಳ ನೋಂದಣಿ ಪ್ರಕ್ರಿಯೆ ಸ್ಥಗಿತ ಮುಷ್ಕರ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರವಾನಗಿ ಪಡೆದ ಒಕ್ಕೂಟದ ಸಂಘಟಕ ಜಿ.ಕೃಷ್ಣ ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಶುಕ್ರವಾರ ಮಾತನಾಡಿ, ಸರ್ಕಾರ ಪಾರದರ್ಶಕತೆ, ವೇಗ ಹಾಗೂ ಡಿಜಿಟಲೀಕರಣದ ಹೆಸರಿನಲ್ಲಿ ಜಾರಿಗೆ ತಂದಿರುವ ಕಾವೇರಿ-2 ತಂತ್ರಾಂಶ, ಅದರಲ್ಲೂ ವಿಶೇಷವಾಗಿ ಸಿಟಿಜನ್ ಲಾಗಿನ್ ವಿಧಾನವು ಸಾರ್ವಜನಿಕರಿಗೆ ಹಾಗೂ ಅನುಭವ ಸಂಪನ್ನ ಪತ್ರ ಬರಹಗಾರರಿಗೆ ಭಾರೀ ತೊಂದರೆ ಸೃಷ್ಟಿಸಿದೆ ಎಂದರು.

ಆಸ್ತಿ ನೋಂದಣಿ ಪ್ರಕ್ರಿಯೆಯನ್ನು ಸಂಪೂರ್ಣ ಆನ್‌ಲೈನ್ ಗೊಳಿಸಿರುವುದರಿಂದ ಶೇ.80 ರಷ್ಟು ಸಾರ್ವಜನಿಕರು, ಅವಿದ್ಯಾವಂತರು,




ರೈತರು, ಕೂಲಿ ಕಾರ್ಮಿಕರು ದೊಡ್ಡ ಸಂಕಷ್ಟಕ್ಕೆ ಒಳಗಾಗಿದ್ದಾರೆ. ವಂಚಕರು ಅನ್ಯಾಯ ಮಾಡುವ ಸಾಧ್ಯತೆ ಇದೆ. ಹೀಗಾಗಿ ಸರ್ಕಾರವು ಮುಂದಿನ ದಿನಗಳಲ್ಲಿ ಕಾವೇರಿ-3 ಮೂಲಕ ಫೇಸ್ ಲೆಸ್ ಹಾಗೂ ಪೇಪರ್‌ಲೆಸ್ ನೋಂದಣಿ ಜಾರಿಗೊಳಿಸಲು ಯತ್ನಿಸುತ್ತಿರುವುದು ಸಾರ್ವಜನಿಕರಲ್ಲಿ ಹಾಗೂ ಪತ್ರ ಬರಹಗಾರರಲ್ಲಿ ಆತಂಕ ಹೆಚ್ಚಿಸಿದೆ.

ಸಿಟಿಜನ್ ಲಾಗಿನ್ ಬಳಸಿ ಆನ್‌ಲೈನ್ ನೋಂದಣಿ ಮಾಡಿಕೊಡುತ್ತೇವೆಂದು ಅನಭಿಜ್ಞ ಡಿಟಿಪಿ/ಸೈಬರ್ ಸೆಂಟರ್ ಗಳವರೂ ದಸ್ತಾವೇಜು ತಯಾರಿಸುತ್ತೇವೆ ಎಂದು ಅನಾಹುತ

ಉಂಟು ಮಾಡುತ್ತಿದ್ದಾರೆ. ಅವರಿಂದ ತಪ್ಪು ದತ್ತಾಂಶ ಅಪ್‌ಲೋಡ್ ಆಗುವುದರಿಂದ ಸರ್ಕಾರಕ್ಕೆ ಸೂಕ್ತ ಮುದ್ರಾಂಕ ಶುಲ್ಕ ಬರುತ್ತಿಲ್ಲ, ಸಾರ್ವಜನಿಕರು ಮೋಸಕ್ಕೆ ಒಳಗಾಗುತ್ತಿದ್ದಾರೆ, ನೋಂದಣಿ ಹೆಸರಲ್ಲಿ ವಂಚನೆ ಪ್ರಕರಣ ಹೆಚ್ಚುತ್ತಿರುವುದು ದಸ್ತಾವೇಜು ನೋಂದಣಿ ಕ್ಷೇತ್ರದ ಗಂಭೀರ ಸಮಸ್ಯೆಯಾಗಿದೆ ಎಂದರು.

ಈ ಸಂಬಂಧ ಅನೇಕರಿಗೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನ ಆಗಿಲ್ಲ. ಅದರಿಂದ ಹೋರಾಟ ಅನಿವಾರ್ಯ ಆಗಿದ್ದು, ಡಿ. 16 ರಂದು ಬೆಳಗಾವಿ ಚಲೋ ಹೋರಾಟ ಹಮ್ಮಿಕೊಂಡಿದ್ದೇವೆ ಎಂದು ತಿಳಿಸಿದರು.

ಪರವಾನಗಿ ಪಡೆದ ಪತ್ರ ಬರಹಗಾರರಿಗೆ ಪ್ರತ್ಯೇಕ ಲಾಗಿನ್ ಐಡಿ ನೀಡಬೇಕು. ನೋಂದಾಯಿಸಲ್ಪಡುವ ಪ್ರತಿ ದಸ್ತಾವೇಜಿಗೆ ಪತ್ರ ಬರಹಗಾರ ಅಥವಾ ವಕೀಲರ ಬಿಕ್ಕಲಂ ಕಡ್ಡಾಯ ಮಾಡಬೇಕು. ಎಲ್ಲಾ ಪತ್ರ ಬರಹಗಾರರಿಗೆ ರಾಜ್ಯಾದ್ಯಂತ ಏಕ ಮಾದರಿ ಗುರುತಿನ ಚೀಟಿ ನೀಡಬೇಕು. ಪತ್ರ ಬರಹಗಾರರ ವೃತ್ತಿ ಉಳಿಯಲಿ, ಸಾರ್ವಜನಿಕರಿಗೆ ಸುಗಮ ಹಾಗೂ ಸುರಕ್ಷಿತ ನೋಂದಣಿ ಪ್ರಕ್ರಿಯೆ ಸಿಗಲಿ ಎಂಬುದು ನಮ್ಮ ಹೋರಾಟದ ಉದ್ದೇಶ. ಇದಕ್ಕೆ ಸಾರ್ವಜನಿಕರು, ರೈತರು, ವಕೀಲರು, ಸಂಘಟನೆಗಳವರು ಬೆಂಬಲ ನೀಡಬೇಕೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಪರಮೇಶ್, ತುಳಸಿದಾಸ್, ರೇಖಾ ಪ್ರಸಾದ್, ರಾಜಮ್ಮ, ತುಳಸಿ ಪ್ರಸಾದ್ ಇದ್ದರು.

# ಎಂ.ಕೃಷ್ಣ ಅಂಧ ಮಕ್ಕಳ ಶಾಲೆ ನೂತನ ಕಟ್ಟಡಕ್ಕೆ ನಿರ್ಧಾರ

## ಅಂಧರ ಒಕ್ಕೂಟದಲ್ಲಿ 40 ಲಕ್ಷ ರೂ. | ಹೆಚ್ಚಿನ ಹಣಕ್ಕಾಗಿ ದಾನಿಗಳ ಮೊರೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಎಂ.ಕೃಷ್ಣ ಅಂಧ ಮಕ್ಕಳ ಶಾಲಾ ಕಟ್ಟಡ ಸಂಪೂರ್ಣ ಶಿಥಿಲಾವಸ್ಥೆ ತಲುಪಿದ್ದು ನೂತನ ಕಟ್ಟಡಕ್ಕೆ ಸರ್ಕಾರದಿಂದ ಅನುದಾನ ದೊರೆಯದ ಹಿನ್ನೆಲೆಯಲ್ಲಿ ದಾನಿಗಳ ಮೊರೆ ಹೋಗಲು ಅಂಧರ ಒಕ್ಕೂಟ ನಿರ್ಧರಿಸಿದೆ.

1986ರಲ್ಲಿ ಆರಂಭವಾದ ಎಂ.ಕೃಷ್ಣ ಅಂಧ ಮಕ್ಕಳ ಶಾಲೆ ಅನುದಾನಿತ ಸಂಸ್ಥೆಯಾದರೂ 1989-90ರ ಕಾನೂನು ಪ್ರಕಾರ ಸಂಸ್ಥೆಗೆ ಹೆಚ್ಚುವರಿ ಆರ್ಥಿಕ ನೆರವು ನೀಡಲು ಸಾಧ್ಯವಿಲ್ಲವೆಂದು ಸರ್ಕಾರ ಹೇಳಿದೆ.

ಆರಂಭದಲ್ಲಿ 11 ಕಾಯಂ ಸಿಬ್ಬಂದಿ ಮಂಜೂರು ಮಾಡಲಾಗಿತ್ತು. ಅದರಲ್ಲಿ 8 ಜನರು ವಯೋನಿವೃತ್ತಿ ಹೊಂದಿದ್ದು ಪ್ರಸ್ತುತ ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಡಿ ದರ್ಜೆಯ ಕಾಯಂ ನೌಕರರಿದ್ದಾರೆ. 1 ರಿಂದ 10ನೇ ತರಗತಿ ವರೆಗೆ 20 ಅಂಧ ಮಕ್ಕಳು ವ್ಯಾಸಂಗ ಮಾಡುತ್ತಿದ್ದು ಅದರಲ್ಲಿ 10 ಮಕ್ಕಳಿಗಷ್ಟೇ ಪ್ರತಿ ತಿಂಗಳು ಸರ್ಕಾರದಿಂದ ತಲಾ 1,750 ರೂ. ಸಂದಾಯವಾಗುತ್ತದೆ. ಉಳಿದಂತೆ ಎಲ್ಲಾ ಖರ್ಚು ವೆಚ್ಚಗಳನ್ನು ಒಕ್ಕೂಟವೇ ನೋಡಿಕೊಳ್ಳುತ್ತಿದ್ದು ಸರ್ಕಾರದ ನೆರವಿಲ್ಲದೆ ತೊಂದರೆ ಅನುಭವಿಸುವಂತಾಗಿದೆ.


ಮೈಸೂರು ಹೊರತುಪಡಿಸಿ ರಾಜ್ಯದ ಯಾವ ಜಿಲ್ಲೆಯಲ್ಲೂ ಅಂಧ ಮಕ್ಕಳ ಶಾಲೆಯಿಲ್ಲದ ಸಮಯದಲ್ಲಿ ಹಾಸನದಲ್ಲಿ ಅಂಧ ಮಕ್ಕಳ ಶಾಲೆ ಪ್ರಾರಂಭಿಸಲಾಯಿತು. ಒಂದು ಕಾಲದಲ್ಲಿ 70 ರಿಂದ 80 ವಿದ್ಯಾರ್ಥಿಗಳಿಂದ ತುಂಬಿ ತುಳುಕುತ್ತಿದ್ದ ಶಾಲೆಯಲ್ಲಿ ಪ್ರಸ್ತುತ 20 ವಿದ್ಯಾರ್ಥಿಗಳಷ್ಟೇ ಇದ್ದಾರೆ.

ಹಳೆಯ ಕಟ್ಟಡ, ಶಿಕ್ಷಕರ ಕೊರತೆ, ಮಕ್ಕಳಿಗೆ ಪ್ರೋತ್ಸಾಹ ಇಲ್ಲದೆ ಇರುವುದರಿಂದ ಮಕ್ಕಳ ದಾಖಲಾತಿಯಲ್ಲಿ ಇಳಿಕೆಯಾಗಿದೆ. ನಾಮಫಲಕಗಳಿಗೂ ಬಣ್ಣ ಬಳಿಯದೆ ಪುರಾತನ ಕಾಲದ ಕೊಂಪೆಯಂತೆ ಶಾಲೆ ಭಾಸವಾಗುತ್ತದೆ. ಶಾಲೆಯನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕೆಂದು ಪಣ ತೊಟ್ಟಿರುವ ಅಂಧರ ಒಕ್ಕೂಟದ ಪದಾಧಿಕಾರಿಗಳು ಅನುದಾನಕ್ಕಾಗಿ ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಲು ಮುಂದಾಗಿದ್ದಾರೆ.

ಪ್ರಸ್ತುತ 40 ಲಕ್ಷ ರೂ. ಟ್ರಸ್ಟ್ ಬಳಿಯಿದೆ. ಮೂರಂತಸ್ತಿನ ಕಟ್ಟಡ ನಿರ್ಮಾಣಕ್ಕೆ ನಿರ್ಧರಿಸಿದ್ದು 50 ಕೊಠಡಿಗಳ ಭವ್ಯ ಕಟ್ಟಡ, ಆಟದ ಮೈದಾನ, ಹಾಸ್ಟೆಲ್ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಅದಕ್ಕಾಗಿ 6 ರಿಂದ 7 ಕೋಟಿ ರೂ. ಅನುದಾನದ ಅವಶ್ಯಕತೆಯಿದ್ದು ಹಣ ಹೊಂದಿಸಲು ಹರಸಾಹಸಪಡುವಂತಾಗಿದೆ.

### ಶಾಲೆ ಬೆಳೆದು ಬಂದ ಹಾದಿ

1980ರ ದಶಕದಲ್ಲಿ ತಮ್ಮಯ್ಯ, ಡಾ.ಜಗನ್ನಾಥ್, ಡಾ.ಶಂಕರ್ ಇತರ ಸಮಾನ ಮನಸ್ಕರೆಲ್ಲ ಸೇರಿ ಅಂಧರ ಶ್ರೇಯೋಭಿವೃದ್ಧಿಗಾಗಿ ಶಾಲೆ ತೆರೆಯಬೇಕೆಂದು ನಿರ್ಧರಿಸಿದಾಗ ಹುಟ್ಟಿಕೊಂಡಿದ್ದೇ ಅಂಧ ಮಕ್ಕಳ ಶಾಲೆ. ಮೊದಲು ದೇವಿಗೆರೆಯ ಬಾಡಿಗೆ ಕಟ್ಟಡದಲ್ಲಿ ನಾಲ್ವರು ಮಕ್ಕಳಿಂದ ಶುರುವಾದ ಶಾಲೆ ನಂತರ ಕುವೆಂಪು ನಗರದ ಮನೆಯೊಂದಕ್ಕೆ ಸ್ಥಳಾಂತರಗೊಂಡಿತ್ತು. 1989ರಲ್ಲಿ ಹಾಸನ ಜಿಲ್ಲಾಧಿಕಾರಿ ಆಗಿದ್ದ ಉಪೇಂದ್ರ ತ್ರಿಪಾಠಿ ಅವರು ಕಾರ್ಯಕ್ರಮವೊಂದಕ್ಕೆ ಶಾಲೆಗೆ ಭೇಟಿ ನೀಡಿದಾಗ ಕಿಷ್ಕಿಂಧೆಯಂತಹ ಜಾಗದ ಜೊತೆಗೆ ಅದು ಬಾಡಿಗೆ ಮನೆ ಎಂಬುದನ್ನು ಅರಿತು ಒಕ್ಕೂಟದ ಪದಾಧಿಕಾರಿಗಳೊಂದಿಗೆ ಚರ್ಚಿಸಿ ನಗರದ ಸಾಲಗಾಮೆ ರಸ್ತೆಯಲ್ಲಿ 1 ಎಕರೆ ಜಾಗ ಮಂಜೂರು ಮಾಡಿ ಕಟ್ಟಡ ನಿರ್ಮಾಣಕ್ಕೆ ಮುತುವರ್ಜಿ ವಹಿಸಿದರು. ಬಳಿಕ ಹುದ್ದೆ ಭರ್ತಿ, ಅಗತ್ಯ ಅನುದಾನವನ್ನು ಸರ್ಕಾರದಿಂದ ಕೊಡಿಸಿ ನೆರವಾಗಿದ್ದರು. ಅವರ ವರ್ಗಾವಣೆ ಬಳಿಕ ಯಾವ ಸೌಲಭ್ಯ ದೊರೆಯದ ಹಿನ್ನಲೆಯಲ್ಲಿ ಅಂಧರ ಒಕ್ಕೂಟವೇ ಎಲ್ಲಾ ಜವಾಬ್ದಾರಿ ಹೊರಬೇಕಾಯಿತು. ದಿ. ಮಾಜಿ ಸಚಿವ ಜಿ.ಪುಟ್ಟಸ್ವಾಮಿಗೌಡ ಅವರು ಶಾಲೆಗೆ ಕಾಂಪೌಂಡ್




ನಿರ್ಮಿಸಿಕೊಟ್ಟಿದ್ದಾರೆ ಎಂಬುದನ್ನು ಹೊರತುಪಡಿಸಿದರೆ ನಂತರದ ದಶಕಗಳಲ್ಲಿ ಈ ಶಾಲೆಗೆ ಸರ್ಕಾರದ ಒಂದು ರೂಪಾಯಿ ನೆರವು ಸಿಕ್ಕಿಲ್ಲ.

ಮಹಾನಗರ ಪಾಲಿಕೆ ಹಾಗು ಸ್ಥಳೀಯ ಸಂಸ್ಥೆಗಳಲ್ಲಿ ಅಂಗವಿಕಲರ ಕಲ್ಯಾಣಕ್ಕೆ ಶೇ. 5 ರಷ್ಟು ಅನುದಾನ ಮೀಸಲಿಡಲಾಗುತ್ತದೆ. ಅದರಲ್ಲಿ ಸ್ವಲ್ಪ ಹಣವನ್ನು ಕಟ್ಟಡಕ್ಕೆ ವಿನಿಯೋಗಿಸಬೇಕೆಂದು ಬೇಡಿಕೆ ಸಲ್ಲಿಸಲಾಗಿದೆ. ಕ್ಷೇತ್ರ ಶಾಸಕ ಹೆಚ್.ಪಿ.ಸ್ವರೂಪ್, ಸಂಸದ ಶ್ರೇಯಸ್ ಪಟೇಲ್ ಅವರು ಸಹ ನೆರವು ನೀಡುವ ಭರವಸೆ ನೀಡಿದ್ದು ಶೀಘ್ರದಲ್ಲೇ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರುವ ಸಾಧ್ಯತೆಗಳಿವೆ.

# ಹಳ್ಳಿಗಳಲ್ಲಿ ಒಂಟಿ ಸಲಗ ಸಂಚಾರ

## ಎಚ್ಚರ ವಹಿಸಲು ಸೂಚನೆ..

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲ್ಲೂಕಿನ ಉದಯವಾರ ಗ್ರಾಮದಲ್ಲಿದ್ದ ಒಂಟಿ ಸಲಗ ಕಾಡಾನೆ ಅರೇಹಳ್ಳಿ ಬೇಲೂರು ರಸ್ತೆಯನ್ನು ದಾಟಿ ಲಿಂಗಾಪುರ, ಕಡೆಗರ್ಜೆಗೆ ಬಂದಿದೆ. ಹೀಗಾಗಿ ಅರೇಹಳ್ಳಿ ಮತ್ತು ಬಿಕ್ಕೋಡು ಹೋಬಳಿ ವ್ಯಾಪ್ತಿಯ ಸಾರ್ವಜನಿಕರು ಎಚ್ಚರ ವಹಿಸುವಂತೆ ತಿಳಿಸಲಾಗಿದೆ.

ಕಾಡಾನೆ ಕಡೆಗರ್ಜೆಯ ಮಲ್ಲೇಶ್ ಗೌಡ ಅವರ ತೋಟದಲ್ಲಿದೆ. ಈ ಒಂಟಿ ಕಾಡಾನೆ ಬೇಲೂರು ತಾಲ್ಲೂಕಿನ ಹಿರಿಗರ್ಜೆ, ಹಿರಿಗರ್ಜೆ ಕೊಪ್ಪಲು, ಮಲ್ಲಾಪುರ, ವೆಂಕಟಿಪೇಟೆ, ಹುಲ್ಕೋಡು, ಸೂರ್ಕೋಡು, ಹೆಗ್ಗಡಿಹಳ್ಳಿ, ಬೆಳ್ಳಾವರ ಭಾಗದಲ್ಲಿ ಸಂಚರಿಸಬಹುದಾಗಿದೆ. ಆದ್ದರಿಂದ ಸುತ್ತಮುತ್ತಲಿನ ಗ್ರಾಮಸ್ಥರು, ರಸ್ತೆಯಲ್ಲಿ ಸಂಚಾರಿಸುವ ವಾಹನ ಸವಾರರು ತೋಟ, ಗದ್ದೆಗೆ ತೆರಳುವ ರೈತರು, ಸಾರ್ವಜನಿಕರು ಎಚ್ಚರಿಕೆಯಿಂದ ಇರುವಂತೆ ಜಿಲ್ಲಾ ಆನೆ ಕಾರ್ಯಪಡೆ ಮುನ್ಸೂಚನೆ ನೀಡಿದೆ.

ಸಕಲೇಶಪುರ ತಾಲ್ಲೂಕಿನ ಕಿರೇಹಳ್ಳಿ ಗ್ರಾಮದ ಶ್ರೀನಿವಾಸ್ ಎಸ್ಟೇಟ್ ಹಾಗು ಮನೋಹರ್ ಪಿರೇರಾ ತೋಟದ, ಸುತ್ತ ಮುತ್ತ ಕಾಡಾನೆಗಳು ಕಂಡು ಬಂದಿವೆ. ಹಾನುಬಾಳು ಹೋಬಳಿಯ ಕುಮಾರಿಹಳ್ಳಿ, ಹೋಡಚಿಹಳ್ಳಿ,



ಹೆತ್ತೂರು ಮತ್ತು ಯಸಳೂರು ಹೋಬಳಿ ವ್ಯಾಪ್ತಿಯ ಪಟ್ಲ ಗ್ರಾಮದ ದೊಡ್ಡಹಡ್ಲು, ದಬ್ಬಳ್ಳಿ ಗ್ರಾಮದ ನೀಲಗಿರಿ ನೆಡುತೋಪು ಹಾಗು ಜಯಣ್ಣ ಅವರ ತೋಟ, ಕುಮತಹಳ್ಳಿ ಗ್ರಾಮದ ದೇವರ ಬೆಟ್ಟ, ಹಿರಿಯೂರು ಗ್ರಾಮದ ಪ್ಲಾಂಟೇಷನ್, ಹಾಡ್ಯ ಗ್ರಾಮದ ದಿಣ್ಣೆಕೆರೆ ಹಡ್ಲು, ಕಿರ್ಕಳ್ಳಿ ಗ್ರಾಮದ ಒಂಟಿಗದ್ದೆ, ಮರಡಿಕೆರೆ ಗ್ರಾಮದ ಕೈ ಕಾಲ್ ಕುಯ್ಯೋ ಮಂಟಿ, ಬಾಚಿಹಳ್ಳಿ ಗ್ರಾಮದ ಕೆರೆದಿನೆ, ಮರ್ಕಳ್ಳಿ ಗ್ರಾಮದ ಕಲ್ಲುತೋಟ ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡಿವೆ.

ಬೇಲೂರು ತಾಲ್ಲೂಕಿನ ಜಗಬೋರನಹಳ್ಳಿ ಗ್ರಾಮದ ಜಗಬೋರನಹಳ್ಳಿ ಫಾರೆಸ್ಟ್, ಲಕ್ಷ್ಮೀಪುರ ಹಾಗೂ ಕಣಗುಪ್ಪೆ ಗ್ರಾಮದ ಹಿರೇಗೌಡರ ತೋಟ, ಬಸವೇಗೌಡ, ಸುರೇಶ್ ಅವರ ತೋಟ, ನೆರಳಕಟ್ಟೆ ಗ್ರಾಮದ ಸಾಲಾರ್ ತೋಟ, ಐಬಿಸಿ ಎಸ್ಟೇಟ್, ಸುತ್ತಮುತ್ತ ಕಾಡಾನೆಗಳ ಸಂಚಾರ ನಡೆಸಿವೆ.

# ಗ್ರಾಮೀಣ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅವಕಾಶ ಹೆಚ್ಚಲಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್


ಹೊಳೆನರಸೀಪುರ: ಗ್ರಾಮೀಣ ಭಾಗದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ನವೋದಯದಂತಹ ಶಾಲೆಗಳಲ್ಲಿ ಅವಕಾಶ ಪಡೆಯುವಂತಾಗಬೇಕು ಎಂದು ಪ್ರಾಂಶುಪಾಲ ಆರ್.ಚಕ್ರವರ್ತಿ ಹೇಳಿದರು.

ತಾಲೂಕಿನ ಮಾವಿನಕೆರೆ ಗ್ರಾಮದ ಜವಾಹರ್ ನವೋದಯ ವಿದ್ಯಾಲಯದಲ್ಲಿ ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಅರ್ಹತೆಯುಳ್ಳ ವಿದ್ಯಾರ್ಥಿಗಳಿಗೆ ಅವಕಾಶ ದೊರೆಯಬೇಕು. ಅದರಲ್ಲೂ ಗ್ರಾಮೀಣರು ಮಾಹಿತಿ ಕೊರತೆಯಿಂದ ಅವಕಾಶ ವಂಚಿತರಾಗಬಾರದು. ಈ ನಿಟ್ಟಿನಲ್ಲಿ ಮಾಧ್ಯಮಗಳ ಸಹಕಾರ ಮುಖ್ಯವಾಗಿರುತ್ತದೆ. ದೇಶದಾದ್ಯಂತ ಡಿ. 13ರ ಶನಿವಾರ ನವೋದಯ ಪ್ರವೇಶ ಪರೀಕ್ಷೆ ನಡೆಯಲಿದೆ. ಜಿಲ್ಲೆಯ 8 ತಾಲೂಕಿನಿಂದ ಬಾಲಕ, ಬಾಲಕಿಯರು ಸೇರಿ 3,544 ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ನಿರೀಕ್ಷೆ ಇದೆ. ಮಾವಿನಕೆರೆ ನವೋದಯ ಶಾಲೆಗೆ ಆಯಾ ಜಾತಿ ವರ್ಗೀಕೃತ ಅನುಸಾರ 80 ವಿದ್ಯಾರ್ಥಿಗಳಿಗೆ ಮಾತ್ರವೇ ಪ್ರವೇಶ ಅವಕಾಶ ಇದೆ. ಊಟ, ವಸತಿ, ಕ್ರೀಡೆ, ಸಂಗೀತ ಎಲ್ಲ ರೀತಿಯ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಜತೆಗೆ ವಿದ್ಯಾರ್ಥಿಗಳು ಉತ್ತಮ ಭವಿಷ್ಯ ರೂಪಿಸಿಕೊಡಲು ಬಡ, ಗ್ರಾಮೀಣ ಅರ್ಹ ವಿದ್ಯಾರ್ಥಿಗಳು ಮುದಾಗಬೇಕೆಂದರು. ಜಿಲ್ಲೆಯಲ್ಲಿ 15 ಪರೀಕ್ಷಾ ಕೇಂದ್ರಗಳು ಕಾರ್ಯನಿರ್ವಹಿಸಲಿದೆ. ಡಿ.13ರ ಬೆಳಿಗ್ಗೆ 11.30ರ ಒಳಗೆ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಲ್ಲಿ ಪ್ರವೇಶಿಸಬೇಕಿದೆ. ಹೊಳೆನರಸೀಪುರ ತಾಲೂಕಿನಲ್ಲಿ ಬಾಲಕ ಮತ್ತು ಬಾಲಕಿಯರ ಪದವಿ ಪೂರ್ವ ಕಾಲೇಜು ಹಾಗೂ ಪಾರ್ಕ್ ಹಿಂಭಾಗದ ಮಾಧ್ಯಮಿಕ ಶಾಲೆಯಲ್ಲಿ ಪರೀಕ್ಷಾ ಕೇಂದ್ರ ನಿಗದಿಪಡಿಸಲಾಗಿದೆ. ಜಿಲ್ಲೆಯ ಎಲ್ಲಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅಧೀಕ್ಷಕರು, ನಿರೀಕ್ಷಣಾಧಿಕಾರಿಗಳು ಪರೀಕ್ಷಾ ಕಾರ್ಯಗಳ ನಿರ್ವಹಣೆ ತರಬೇತಿಯಲ್ಲಿ ಪಾಲ್ಗೊಂಡಿದ್ದರು.

ನವೋದಯ ಶಾಲೆಯ ನಿರೀಕ್ಷಣಾಧಿಕಾರಿ ಜನಾರ್ಧನ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ನಂಜುಂಡೇಗೌಡ ಹಾಗೂ ಹಿರಿಯ ಪತ್ರಕರ್ತ ಉದಯಕುಮಾರ್ ಉಪಸ್ಥಿತರಿದ್ದರು.

# ಇಂದಿನಿಂದ ಕ್ರಾಫರ್ಡ್ ಕ್ರಿಕೆಟ್ ಲೀಗ್ ಪಂದ್ಯಾವಳಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: 2ನೇ ವರ್ಷದ ಕ್ರಾಫರ್ಡ್ ಅಧಿಕೃತ ಕ್ರಿಕೆಟ್ ಲೀಗ್ ಪಂದ್ಯಾವಳಿಯನ್ನು ಆಯೋಜಿಸಲಾಗಿದ್ದು, ಕ್ರೀಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪಂದ್ಯಾವಳಿಯನ್ನು ಯಶಸ್ವಿಗೊಳಿಸಬೇಕೆಂದು ಕ್ರಾಫರ್ಡ್ ಆಸ್ಪತ್ರೆಯ ಕ್ಷ-ಕಿರಣ ವಿಭಾಗದ ವ್ಯವಸ್ಥಾಪಕ ರಘು ತಿಳಿಸಿದ್ದಾರೆ. ಆರೋಗ್ಯವೇ ಭಾಗ್ಯ, ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆ ಅತ್ಯಗತ್ಯ. ಈ ನಿಟ್ಟಿನಲ್ಲಿ ಕ್ರಾಫರ್ಡ್ ಆಸ್ಪತ್ರೆ ವತಿಯಿಂದ ಪಟ್ಟಣದ ಸುಭಾಷ್ ಮೈದಾನದಲ್ಲಿ ಡಿ. 13 ರಿಂದ 14ರ ವರೆಗೆ ಎರಡು ದಿನಗಳ ಕಾಲ ಲೀಗ್ ಮಾದರಿಯ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಹೇಳಿದ್ದಾರೆ. ಪಂದ್ಯಾವಳಿಗೆ ಪ್ರತಿ ತಂಡಕ್ಕೂ 5,000 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ಪ್ರಥಮ ಬಹುಮಾನವಾಗಿ 30,000 ರೂ. ನಗದು ಹಾಗೂ ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ 20,000 ರೂ. ಹಾಗೂ ಟ್ರೋಫಿ, ತೃತೀಯ 10,000 ರೂ. ಹಾಗೂ ಟ್ರೋಫಿ, ನಾಲ್ಕನೇ ಬಹುಮಾನವಾಗಿ ಆಕರ್ಷಕ ಟ್ರೋಫಿ ನೀಡಲಾಗುತ್ತದೆ.

ಲೀಗ್ ಮಾದರಿಯಲ್ಲಿ ನಡೆಯುವ ಈ ಪಂದ್ಯಾವಳಿಯಲ್ಲಿ 20 ವಿವಿಧ ಇಲಾಖೆಗಳ ತಂಡಗಳು ಭಾಗವಹಿಸಲಿವೆ. ಮೊದಲ ದಿನ 10 ತಂಡಗಳು ತಲಾ ನಾಲ್ಕು ಪಂದ್ಯಗಳನ್ನು ಎರಡು ಅಂಕಣಗಳಲ್ಲಿ ಆಡಲಿದ್ದು, ಎರಡನೇ ದಿನ ಉಳಿದ 10 ತಂಡಗಳು ತಲಾ ನಾಲ್ಕು ಪಂದ್ಯಗಳನ್ನು ಎರಡು ಅಂಕಣಗಳಲ್ಲಿ ಆಡಲಿವೆ. ಮೊದಲ ದಿನ ಅಗ್ರಸ್ಥಾನ ಗಳಿಸುವ ಎರಡು ತಂಡಗಳು ಮತ್ತು ಎರಡನೇ ದಿನ ಅಗ್ರಸ್ಥಾನ ಗಳಿಸುವ ಎರಡು ತಂಡಗಳು ಫೈನಲ್ ಹಂತದಲ್ಲಿ ಪರಸ್ಪರ ಸೆಣಸಲಿವೆ. ಶನಿವಾರ ಬೆಳಿಗ್ಗೆ 9 ಗಂಟೆಗೆ ಕ್ರಾಫರ್ಡ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಅರುಣ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಗಣ್ಯರು ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ. ಭಾನುವಾರ ಸಂಜೆ 5.30ಕ್ಕೆ ಪ್ರಶಸ್ತಿ ವಿತರಣಾ ಕಾರ್ಯಕ್ರಮ ನಡೆಯಲಿದ್ದು, ಕ್ರಾಫರ್ಡ್ ಆಸ್ಪತ್ರೆಯ ಎಲ್ಲಾ ವೈದ್ಯರು ಉಪಸ್ಥಿತರಿರುವರು.

ಕ್ರೀಡಾಪಟುಗಳು ಹಾಗೂ ಕ್ರೀಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪಂದ್ಯಾವಳಿಯನ್ನು ಯಶಸ್ವಿಗೊಳಿಸಬೇಕೆಂದು ಆಯೋಜಕರು ಮನವಿ ಮಾಡಿದ್ದಾರೆ.

# ಹಕ್ಕು ಪಡೆಯದಿರುವ ಠೇವಣಿಗಳ ನಿವಾರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಲೀಡ್ ಬ್ಯಾಂಕ್ ವತಿಯಿಂದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಹಕ್ಕು ಪಡೆಯದೆ ಇರುವ ಠೇವಣಿಗಳ ನಿವಾರಣೆ ಮತ್ತು ತೀರ್ಮಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಪ್ರಾದೇಶಿಕ ನಿರ್ದೇಶಕಿ ಗಾಯತ್ರಿ ಮಾತನಾಡಿ, ಹಕ್ಕು ಪಡೆಯದ ಠೇವಣಿಗಳನ್ನು ಸರಿಯಾದ ದಾಖಲೆಗಳ ಮೂಲಕ ಸುಲಭವಾಗಿ ವಾಪಸ್ ಪಡೆಯಲು ಸಾರ್ವಜನಿಕರು ಅನುಸರಿಸಬೇಕಾದ ವಿಧಾನಗಳ ಕುರಿತು ತಿಳಿಸಿದರು. ಶಿಬಿರದಲ್ಲಿ ಈಗಾಗಲೇ ಸೂಕ್ತ ದಾಖಲೆಗಳನ್ನು ನೀಡಿ ಕ್ಲೈಮ್ ಮಾಡಿದ ಠೇವಣಿಗಳನ್ನು, ಖಾತೆಗಳಿಗೆ ವರ್ಗಾಯಿಸಿದ ದಾಖಲೆಗಳನ್ನು, ಫಲಾನುಭವಿಗಳಿಗೆ ನೀಡಲಾಯಿತು. ಹಲವು ಗ್ರಾಹಕರು ಹಣವನ್ನುಕ್ಲೈಮ್ ಮಾಡಲುಅಗತ್ಯ ಅರ್ಜಿಗಳನ್ನು ಈ ಶಿಬಿರದ ಮೂಲಕ ಬ್ಯಾಂಕುಗಳಿಗೆ ಸಲ್ಲಿಸಿದರು.

ಬೆಂಗಳೂರಿನ ಆರ್.ಬಿ.ಐ. ಸಹಾಯಕ ಮಹಾ ಪ್ರಬಂಧಕ ಪಿ.ಅರುಣ್ ಕುಮಾರ್, ಲೀಡ್ ಬ್ಯಾಂಕ್ ಜಿಲ್ಲಾ ಅಗ್ರಣಿ ವ್ಯವಸ್ಥಾಪಕಿ ಲತಾ ಸರಸ್ವತಿ, ಅರುಳ್ ಸೆಲ್ವಿ, ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಚಂದ್ರಮೌಳಿ ಮತ್ತಿತರರು ಉಪಸ್ಥಿತರಿದ್ದರು.

# ಇಂದು ಎಐಡಿಎಸ್ಓ ಸಮ್ಮೇಳನ : ಚರ್ಚೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಸ್ಥಾಪನೆ ನಿರ್ಧಾರ ಕೈಬಿಟ್ಟು, ಸಾರ್ವಜನಿಕ ಶಿಕ್ಷಣ ಉಳಿಸಿ ಮತ್ತು ಹಾಸನ ವಿದ್ಯಾಲಯ ಉಳಿಸಿ ಎಂಬ ಬೇಡಿಕೆಯೊಂದಿಗೆ ಎಐಡಿಎಸ್ಓ ಪ್ರಥಮ ವಿದ್ಯಾರ್ಥಿ ಸಮ್ಮೇಳನ ಡಿ.13 ರಂದು ನಡೆಯಲಿದೆ ಎಂದು ಜಿಲ್ಲಾ ಸಂಚಾಲಕಿ ಚೈತ್ರಾ ತಿಳಿಸಿದ್ದಾರೆ.

ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಸಮ್ಮೇಳನ ನಡೆಯಲಿದೆ. ಕಸಾಪ ಜಿಲ್ಲಾಧ್ಯಕ್ಷ ಮಲ್ಲೇಶ್‌ಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಸರ್ಕಾರ ರಾಜ್ಯದಲ್ಲಿ 6,000 ಮ್ಯಾಗ್ನೆಟ್ ಶಾಲೆಗಳನ್ನು ಸ್ಥಾಪಿಸುವ ಮೂಲಕ 40,000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುವ ಮೂಲಕ ಬಡ ಮಕ್ಕಳ ಶಿಕ್ಷಣ ಕನಸನ್ನು ಕಸಿದುಕೊಳ್ಳಲು ಮುಂದಾಗುತ್ತಿದೆ. ಹಾಸನ ವಿಶ್ವವಿದ್ಯಾಲಯಕ್ಕೆ ಬೇಕಾದ ಅನುದಾನ, ಮೂಲ ಸೌಕರ್ಯಗಳನ್ನು ನೀಡದೆ ಇರುವ ಬಗ್ಗೆ ಸಮ್ಮೇಳನದಲ್ಲಿ ಚರ್ಚೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.


# ನಕಲಿ ದಾಖಲೆ ಸೃಷ್ಟಿಸಿ ವೃದ್ಧೆಯ ಆಸ್ತಿಗೆ ಕನ್ನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ವಯೋವೃದ್ಧೆ ಬದುಕಿರುವಾಗಲೇ ಅವರು ಸತ್ತಿದ್ದಾರೆ ಎಂದು ಅವರ ಹೆಸರಿನಲ್ಲಿ ಮರಣ ಪ್ರಮಾಣ ಪತ್ರ ಮಾಡಿಸಿ ಆಸ್ತಿ ಲಪಟಾಯಿಸಿದ ಆರೋಪ ಕೇಳಿಬಂದಿದೆ.

ತಾಲೂಕಿನ ಚಿಕ್ಕನಾಯಕನಹಳ್ಳಿ ಗ್ರಾಮದಲ್ಲಿ ಆರೋಪ ಕೇಳಿ ಬಂದಿದ್ದು, ಈ ಬಗ್ಗೆ ಏನೂ ತಿಳಿಯದ ಅಜ್ಜಿ ಸಿದ್ದಮ್ಮ, ಮುಂದೇನು ಎಂದು ಕಣ್ ಕಣ್ ಬಿಡುತ್ತಿದ್ದಾರೆ.

ಸಿದ್ದಮ್ಮ ಅವರ ಹೆಸರಿನಲ್ಲಿ ಸರ್ವೆ ನಂ. 68ರಲ್ಲಿ 1 ಎಕರೆ 20 ಗುಂಟೆ ಭೂಮಿ ಇದೆ. ಇದೇ ವೃದ್ಧೆಗೆ ಜೀವನಾಧಾರವಾಗಿದೆ. ಸದರಿ ಭೂಮಿಯನ್ನು ಇದೇ ತಾಲೂಕಿನ ಬಾಳ್ಳುಪೇಟೆ ಗ್ರಾಮದ ಶೇಖ್ ಅಹಮದ್ ಎಂಬಾತ ತಾನು ಸಿದ್ದಮ್ಮ ಅವರ ದತ್ತು



ಪುತ್ರ ಎಂದು ನಕಲಿ ವಂಶವೃಕ್ಷ ಮಾಡಿಸಿ 2008ರಲ್ಲೇ ಸಿದ್ದಮ್ಮ ವಿಲ್ ಮಾಡಿದಂತೆ ಸುಳ್ಳು ದಾಖಲೆ ಸೃಷ್ಟಿ ಮಾಡಿ ವಂಚಿಸಿದ್ದಾನೆ ಎಂದು ದೂರಿದ್ದಾರೆ.

2009ರ ಅ.4 ರಂದು ಅಜ್ಜಿ ಮರಣ ಹೊಂದಿದಂತೆ ಮರಣ ಪ್ರಮಾಣ ಪತ್ರ ಮಾಡಿಸಿ ಸದರಿ ಭೂಮಿಯನ್ನು ತನ್ನಂತೆ ಮಾಡಿಕೊಂಡು ಮೋಸ ಮಾಡಿದ್ದಾನೆ ಎಂದು ಅಜ್ಜಿ ಮತ್ತು ಮಗ ಚಿಂತಾಕ್ರಾಂತರಾಗಿದ್ದಾರೆ. ಶೇಖ್ ಅಹಮದ್ ವಿರುದ್ಧ ಸಿದ್ದಮ್ಮ ಹಾಗೂ ಅವರ ನಿಜ ಪುತ್ರ ನಿಂಗರಾಜು ಪೊಲೀಸರಿಗೆ ದೂರು ನೀಡಿದ್ದಾರೆ.

ಆರೋಪಿ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ನಮಗೆ ಆಗಿರುವ ಅನ್ಯಾಯ ಸರಿಪಡಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಶೇಖ್ ಅಹಮದ್ ನಕಲಿ ದಾಖಲೆ ಸೃಷ್ಟಿಸಲು ಹಣದ ಆಸೆಗೆ ಸಹಾಯ ಮಾಡಿರುವ ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕ, ಉಪ ತಹಸೀಲ್ದಾರ್ ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು ನ್ಯಾಯ ಕೊಡಿಸಬೇಕು ಎಂದು ಮನವಿ ಮಾಡಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಡಿಸೆಂಬರ್-13

1937: ಜಪಾನ್ ಸೇನೆ ಚೀನಾದ ನಾನ್ಜಿಂಗ್ ನಗರವನ್ನು ವಶಪಡಿಸಿಕೊಂಡು 'ನಾನ್ಜಿಂಗ್ ಸಂಹಾರ' ಆರಂಭಿಸಿತು.

1949: ಇಸ್ರೇಲ್ ತನ್ನ ರಾಜಧಾನಿಯನ್ನು ಜೆರುಸಲೇಂ ಎಂದು ಘೋಷಿಸಿತು.

2001: ಭಾರತ ಸಂಸತ್ ಮೇಲೆ ಭಯೋತ್ಪಾದಕ ದಾಳಿ ನಡೆಯಿತು. ಭದ್ರತಾ ಸಿಬ್ಬಂದಿ ಧೈರ್ಯದಿಂದ ದಾಳಿ ತಡೆದರು.

1577: ಸಿಖ್ ಗುರು ರಮ್‌ದಾಸ್ ಅಮೃತಸರ ಪಟ್ಟಣವನ್ನು ನಿರ್ಮಾಣ ಮಾಡಲು ಶಿಲಾನ್ಯಾಸ ಮಾಡಿದರು.

1931: ಭಾರತದಲ್ಲಿ ರಾಜಕೀಯ ಕೈದಿಗಳ ಬಿಡುಗಡೆಗೆ ಸಂಬಂಧಿಸಿದ ಮಹತ್ವದ ಚರ್ಚೆಗಳು ನಡೆದವು.

2000: ಭಾರತದ 28ನೇ ರಾಜ್ಯವಾದ ಜಾರ್ಖಂಡ್‌ಗೆ ಮೊದಲ ವಿಧಾನಸಭೆ ರಚನೆ.

### ಜನನ

1895: ಪ್ರಸಿದ್ಧ ಭಾರತೀಯ ಕ್ರಾಂತಿಕಾರಿ ಭಗತ್ ಸಿಂಗ್ ಅವರ ಸಂಗಾತಿ ಹಾಗೂ ಕ್ರಾಂತಿಕಾರಿ ಬಟುಕೇಶ್ವರ್ ದತ್

### ಮರಣ

1232: ಕನ್ನಡದ ಮಹಾನ್ ವಚನಕಾರ ಶಿವಶರಣ ಹರಿಹರ

1945: ಪ್ರಸಿದ್ಧ ಲೇಖಕಿ ಮತ್ತು ಸಮಾಜ ಸೇವಕಿ ಸರೋಜಿನಿ ನಾಯ್ಡು ಅವರ ಪತಿ ಗೋವಿಂದರಾಜು ನಾಯ್ಡು

# ಹಾಸನದ ದೇವಾಲಯಗಳ ವೈಭವ ಯಾನ

- ವಿಶ್ವಾಸ್ ಡಿ. ಗೌಡ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ ಜಿಲ್ಲಾ ಕೇಂದ್ರವಾಗಿದ್ದು ಪುರಾತನ ಇತಿಹಾಸ ಹೊಂದಿದೆ. ಇಲ್ಲಿನ ಕ್ಷೇತ್ರ ದೇವತೆ ಹಾಸನಾಂಬಾ ದೇವಾಲಯ ಬಾಗಿಲನ್ನು ವರ್ಷಕ್ಕೊಮ್ಮೆ ಮಾತ್ರ ತೆರೆಯುತ್ತಾರೆ. ಇದರ ತೆರೆಯ ಪಕ್ಕದಲ್ಲೇ ಪುರಾತನ ಸಿದ್ದೇಶ್ವರ ದೇವಾಲಯವಿದೆ. ಊರಿನ ವಿವಿಧ ಭಾಗಗಳಲ್ಲಿ ಚನ್ನಕೇಶವ, ನೀರಬಾಗಿಲ ಆಂಜನೇಯ, ಕಾಳಿಕಾ, ಚೌಡೇಶ್ವರಿ ಮಂತಾದ ದೇವಾಲಯಗಳು, ಬಸದಿಗಳು ಇವೆ. ದೇವಿಗೆರೆ ಕೊಳ-ದೇವಾಲಯಗಳು, ಆಕಾಶವಾಣಿ, ನಂದಿನಿ ಕ್ಷೀರ ಕೇಂದ್ರ, ಪ್ರಾಚ್ಯ ವಸ್ತು ಸಂಗ್ರಹಾಲಯ ವೀಕ್ಷಣಾರ್ಹವಾಗಿವೆ.

### ದೊಡ್ಡಗದ್ದವಳ್ಳಿ ಹೊಯ್ಸಳ ವಿಷ್ಣುವರ್ಧನ

ಹೊಯ್ಸಳರ ಕಾಲದ ಹಿರಿಯ ವ್ಯಾಪಾರಿ ಕುಲ್ಲಣರಾವುತ ಹಾಗೂ ಅವನ ಪತ್ನಿ ಸಹಜಾದೇವಿ ದಂಪತಿ 1113ರಲ್ಲಿ ಕೊಲ್ಲಾಪುರ ಲಕ್ಷ್ಮೀ ದೇವಿಯ ಸಂಕೇತವಾಗಿ ನಿರ್ಮಿಸಿದ ದೇವಾಲಯ ಇಲ್ಲಿದೆ. ನಾಲ್ಕು ಗರ್ಭಗೃಹಗಳುಳ್ಳ ಅಪರೂಪದ ಚತುಷ್ಕಟ ವಿನ್ಯಾಸ, ಮಹಾಕಾಳಿ, ಮಹಾಲಕ್ಷ್ಮೀ, ವಿಷ್ಣುಭೂತನಾಥ ಗರ್ಭಗೃಹ, ಅತ್ಯಾಕರ್ಷಕ ಶವಾಸನಸ್ಥಿತ ಮಹಾಕಾಳಿಯ ಮೂಲಮೂರ್ತಿ, ಭೈರವ ಉಪಾಲಯ, ಕದಂಬನಾಗರ ಶೈಲಿಯ 9 ಶಿಖರಗಳು, ಹೊಯ್ಸಳ ರಾಜ ಲಾಂಛನಗಳು ಇಲ್ಲಿನ ಆಕರ್ಷಣೆಗಳು. (ಹಾಸನದಿಂದ 22 ಕಿಮೀ, ಶ್ರವಣಬೆಳಗೊಳದಿಂದ 72 ಕಿ.ಮೀ)

### ಕೋರವಂಗಲ

ಹೊಯ್ಸಳ ದಂಡನಾಯಕ ಹಾಗೂ ಅರಮನೆ ಹೆಗ್ಗಡೆ. ಬೂಚಿಮಯ್ಯ



ಎಂಬಾತನು 1173ರಲ್ಲಿ ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ಬೂಚೇಶ್ವರ ಎಂಬ ದೇವಾಲಯವನ್ನು ನಿರ್ಮಿಸಿದನು. ಇದು ಸುಂದರವಾದ ಪ್ರವೇಶದ್ವಾರ, ಮುಖಮಂಟಪ, ನವರಂಗ, ಗರ್ಭಗೃಹ, ಶಿಖರ, ರಾಜಲಾಂಛನ, ಸೂರ್ಯ ಮತ್ತು ಭೈರವ ಉಪಾಲಯಗಳು, ಭುವನೇಶ್ವರಿಗಳು ದೇವಕೋಷ್ಠಗಳು, ಭಿತ್ತಿಶಿಲ್ಪ ಹಾಗೂ ಬಿಡಿಶಿಲ್ಪಗಳು ಇವುಗಳಿಂದ ಕೂಡಿ ಆಕರ್ಷಕವಾಗಿದೆ. ಪಕ್ಕದಲ್ಲೇ ನಾಕೇಶ್ವರ ಹಾಗೂ ಗೋವಿಂದೇಶ್ವರ ಬೂಚಿಮಯ್ಯನ ಅಣ್ಣಂದಿರು ನಿರ್ಮಿಸಿದ ದೇವಾಲಯ ಶಿಥಿಲ ಸಂಕೀರ್ಣವೂ ಮಧ್ಯೆ ಈ ಸೋದರರ ತಾಯಿ ಮಾಕಣಬ್ಬೆಯು ಕಟ್ಟಿಸಿದ ಮಾಕಸಮುದ್ರ ಕೆರೆಯೂ ಇವೆ. (ಹಾಸನದಿಂದ 12 ಕಿ.ಮೀ., ಶ್ರವಣಬೆಳಗೊಳದಿಂದ 62 ಕಿ.ಮೀ.)

### ಕೊಂಡಜ್ಜಿ

ಬಹು ಸರಳವಾದ ದೇವಾಲಯ. ಆದರೆ ಇದರಲ್ಲಿ ಸುಮಾರು 13-14ನೇ ಶತಮಾನದ ಹೊಯ್ಸಳ ಶೈಲಿಯ 15 ಅಡಿ ಎತ್ತರದ ಪ್ರಸಿದ್ಧ ವರದರಾಜಮೂರ್ತಿ ಇದೆ. ಇದು ಅಲ್ಲಾಳನಾಥ ಎಂದೂ ಜನಪ್ರಿಯವಾಗಿದೆ. ಇದರ ಆಯುಧಗಳು, ಪೀಠ, ಕಿರೀಟ, ಆಭರಣಗಳು ಮುಂತಾದ ಕೆತ್ತನೆಗಳು ಆಕರ್ಷಕವಾಗಿವೆ. ಹೊಯ್ಸಳ ಕಾಲದ ಉನ್ನತ ಶಿಲ್ಪಗಳಲ್ಲಿ ಇದೂ ಒಂದು.ಗರ್ಭಗುಡಿಯ ಒಳಭಾಗಕ್ಕೂ ಮುಕ್ತ ಪ್ರವೇಶವಿದೆ. (ಹಾಸನದಿಂದ, ಶ್ರವಣಬೆಳಗೊಳದಿಂದ 70 ಕಿ.ಮೀ.)

### ಹೊನ್ನಾವರ

ದುದ್ದದ ಬಳಿಯ ಈ ಗ್ರಾಮವು ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಒಂದು ಅಗ್ರಹಾರವಾಗಿತ್ತು. ಇಲ್ಲಿ ಕ್ರಿ.ಶ. 1149ರಲ್ಲಿ ಸೇನಾಪತಿ ಕೋಣೆಯ ಶಂಕರದೇವ ಎಂಬಾತನು ಕೇಶವದೇವರಿಗಾಗಿ ಏಕಕೂಟ ದೇವಾಲಯವನ್ನು ನಿರ್ಮಿಸಿದ್ದಾನೆ. ಇದರ ಹೊರಗೋಡೆಯಲ್ಲಿ ಕೆಲವು ಅರೆಯುಬ್ಬು ಭಿತ್ತಿಶಿಲ್ಪಗಳು, ಶಿಖರ, ಶಾಸನ, ನವರಂಗದ ಸ್ತಂಭಗಳು, ಕೇಶವ ಮೂಲವಿಗ್ರಹ ಮುಂತಾದವು ವೀಕ್ಷಣಾರ್ಹವಾಗಿವೆ. ಊರಿನ ಈಶಾನ್ಯದಲ್ಲಿ ಸೋಮೇಶ್ವರ (ಶಿಥಿಲ)ದೇವಾಲಯವಿದೆ. ಹಲವಾರು ಶಾಸನಗಳು, ಊರಹೊರಗೆ ದೇವೀಬನ, ಕಲ್ಯಾಣಿ ಮುಂತಾದವು ಇವೆ. (ಹಾಸನದಿಂದ 15 ಕಿ.ಮೀ., ಶ್ರವಣಬೆಳಗೊಳದಿಂದ 65 ಕಿ.ಮೀ).

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248